ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ15-02-2025 ರಂದು ಬೊಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಆರ್ ಆರ್ ಎಚ್ ವಕೀಲರಿಂದಃ

ನಾನು ಸಲ್ಲಿಸುತ್ತಿರುವ ಪ್ರಮಾಣ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಮತ್ತು ಪ್ರಮಾಣಪತ್ರದಲ್ಲಿರುವ ವಿಷಯಗಳು ನಾನೇ ಹೇಳಿ ಬರೆಸಿರುತ್ತೇನೆ. ಈ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯ ಭಾಗವಾಗಿ ಪರಿಗಣಿಸಲು ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ಶಿರಳಗಿ ಗ್ರಾಮ ಕೊಂಡ್ಲಿ ಹೊಬಳಿ ಸಿದ್ದಾಪುರ ತಾಲೂಕಿನ ಸರ್ವೆ ನಂ 336/1 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-1 ಎಂದು, ಸಾಕ್ಷಿಯು ದಿಃ 08-08-2022 ಎಂ ಆರ್ ನಂ. ಹೆಚ್ 1 ವೈವಾಟಿ ವರ್ಷ 2022-2023 ಮ್ಯೂಟೆಶನ್ ರೆಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-2 ಎಂದು, ಸಾಕ್ಷಿಯು ದಿಃ 11-01-2024 ರ ಕಲಂ 80 ಸಿಪಿಸಿ ರಡಿಯಲ್ಲಿ ನೋಟಿಸ್ ನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-3 ಎಂದು, ಸಾಕ್ಷಿಯು 12 ಅಂಚೆ ರಶೀಧಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ-4 ಎಂದು, ಸಾಕ್ಷಿಯು ಮೂರು ಅಂಚೆ ರಶೀಧಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-5 ರಿಂದ ನಿ.ಪಿ-7 ಎಂದು, ಸಾಕ್ಷಿಯು ದಿಃ 27-09-2023 ರಂದು ಭೂಮಾಪಕರು ಸಿದ್ದಾಪುರ ರವರು ನೀಡಿದ ನೋಟೀಸ್ ನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-8 ಎಂದು, ಸಾಕ್ಷಿಯು ದಿಃ 27-02-2024 ರಂದು ತಹಶೀಲ್ದಾರ ಸಿದ್ದಾಪುರ ರವರು ನೀಡಿದ ಉತ್ತರದ ನೋಟೀಸ್ ನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-9 ಎಂದು, ಸಾಕ್ಷಿಯು ತಹಶೀಲ್ದಾರ ಸಿದ್ದಾಪುರ ರವರು ನೀಡಿದ ಕಲಂ 80 ಸಿಪಿಸಿ ನೋಟಿಸ್ ಗೆ ಷರಾ ಹಾಜರುಪಡಿಸಿದ್ದು ಅದನ್ನು ನಿ.ಪಿ-10 ಎಂದು, ಸಾಕ್ಷಿಯು ದಿಃ 11-03-2024 ರಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದಾಪುರ ರವರು ನೀಡಿದ ಉತ್ತರದ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-11 ಎಂದು, ಸಾಕ್ಷಿಯು ದಿಃ 12-12-2023 ರಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದಾಪುರ ರವರು ನೀಡಿದ ಎರಡು ಮಾಹಿತಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-12 ಮತ್ತು ನಿ.ಪಿ-13 ಎಂದು, ಸಾಕ್ಷಿಯು ದಿಃ 06-02-2024 ರಂದು ಆಯುಕ್ತರ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ ಧಾರವಾಡ ರವರು ನೀಡಿದ ಜ್ಞಾಪನಾ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-14 ಎಂದು, ಸಾಕ್ಷಿಯು 31-01-2024 ರಂದು ಜಿಲ್ಲಾ ಪಂಚಾಯತ ಕಾರವಾರ ಇವರು ನೀಡಿದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-15

ಎಂದು, ಸಾಕ್ಷಿಯು ದಿಃ 09-01-2024 ರಂದು ಗ್ರಾಮ ಪಂಚಾಯತ ಕಾರ್ಯಾಲಯ ಶಿರಳಗಿ ರವರು ನೀಡಿದ ಮಾಹಿತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-16 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ.**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**